ಪ್ರತಿಪಾದನೆ ಮಾಡುವುದಕ್ಕೆ ಕರ್ನಾಟಕ ವಿದ್ಯುತ್ ಮಂಡಲಿ ಪರವಾಗಿ ಅಡ್ವೊಕೇಟ್ಸ್ ಕೋರ್ಟ್‌ಗೆ ಯಾರು ಅಪಿಯರ್ ಆಗುತ್ತಾರೋ ಅವರಿಗೆ ಇವತ್ತೇ ನಾನು ನಿರ್ದೇಶನ ಕೊಡುತ್ತೇನೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು:– ಮಾನ್ಯ ಅಧ್ಯಕ್ಷರೇ, ಮಾನ್ಯ.....

ಅಧ್ಯಕ್ಷರು:– ಈಗ ಮುಂದಿನ ಪ್ರಶ್ನೆ. ಇದೇ ವಿಚಾರದ ಬಗ್ಗೆ ರಾಯರೆಡ್ಡಿಯವರು, ಇನ್ನೂ ಅನೇಕರು ಕೇಳಿದ್ದಾರೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು:– ಉಳಿದವರಿಂದಲೂ ಕಲೆಕ್ಟ್ ಮಾಡುತ್ತಾರೆಯೇ ? ಅಥವಾ ಅವರೂ ಕೋರ್ಟ್‌ಗೆ ಹೋಗುವವರೆಗೆ ಕಾಯುತ್ತಾರೋ ?

ಶ್ರೀ ಎಸ್. ಎಂ. ಕೃಷ್ಣ:– ಇಲ್ಲಿ ಸ್ಪೆಷಲ್ ಕೋರ್ಟ್ ದೊಡ್ಡ ದೊಡ್ಡ ಕುಳಗಳು. ಆದರೆ 1 ಲಕ್ಷ ಹಾಗೂ ಅದರ ಮೇಲೆ ಇರುವವರು ಮುನ್ಸೀಫ್ ಕೋರ್ಟ್‌ಗೆ ಹೋಗಿರುತ್ತಾರೆ. ಸಿವಿಲ್ ಜಡ್ಜ್ ಕೋರ್ಟ್‌ಗೆ ಹೋಗಿರುತ್ತಾರೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಹೋಗಿರುತ್ತಾರೆ. ಆದುದರಿಂದ ನಮ್ಮ ವಿದ್ಯುತ್ ಮಂಡಲಿಗೆ ನಾವು ಏನು ಮಾಡ್ರನೈಸೇಷನ್ ಪ್ರೋಗ್ರಾಮ್ ಕೈಗೆ ತೆಗೆದುಕೊಂಡಿದ್ದೇವೆ ಅದನ್ನು ನಿರ್ವಹಿಸುವುದಕ್ಕೆ ಅತಿ ಅಗತ್ಯವಾಗಿ ಹಣ ಬೇಕಾಗಿದೆ. ಆದುದರಿಂದ ಮಾನ್ಯ ಸದಸ್ಯರ ಕಾಳಜಿ ಏನಿದೆ, ಬರಬೇಕಾಗಿರತಕ್ಕ 500 ಕೋಟಿ ಚಿಲ್ಲರೆ ಬಾಕಿ ವಸೂಲಿ ಮಾಡಬೇಕೆನ್ನತಕ್ಕದ್ದು ಅದು ನಮಗೆ ಇನ್ನೂ ಹೆಚ್ಚು ಕಾಳಜಿ ಇದೆ. ನಾವು ದೊಡ್ಡ ಗಾತ್ರದಲ್ಲಿ ಮಾಡ್ರನೈಸೇಷನ್ ಪ್ರೋಗ್ರಾಮ್ ಈ ವರ್ಷ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರ ಸಲಹೆ ಸೂಚನೆಗಳು ಏನೇನು ಇವೆ ಅವುಗಳನ್ನು ಅನುಷ್ಠಾನಕ್ಕೆ ತಂದು ಆದಷ್ಟು ಬೇಗ ಇವುಗಳನ್ನು ಫೈಸಲ್ ಮಾಡುವುದಕ್ಕೆ ಸೂಚನೆ ಕೊಡುತ್ತೇವೆ.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಆಯವ್ಯಯದಲ್ಲಿ ನಿಗದಿಯಾದ ಹಣ

369 (1130): ಶ್ರೀ ಶಿವಶೇಖರಪ್ಪಗೌಡ ಶಿರವಾಳ (ಶಹಾಪುರ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1992–93ನೇ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸರ್ಕಾರದವರು ಆಯವ್ಯಯದಲ್ಲಿ ನಿಗದಿಪಡಿಸಲಾಗಿರುವ ಹಣ ಎಷ್ಟು ?

ಆ) ಆ ಪೈಕಿ ಸರ್ಕಾರದವರು ಇದುವರೆವಿಗೂ ಬಿಡುಗಡೆ ಮಾಡಿರುವ ಹಣವೆಷ್ಟು ?

ಇ) ಬಿಡುಗಡೆಯಾದ ಹಣದ ಪೈಕಿ ವೆಚ್ಚವಾಗಿರುವ ಹಣ ಎಷ್ಟು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) 155 ಕೋಟಿ ರೂ.ಗಳು

ಆ) ಕಾಮಗಾರಿಗಳಿಗಾಗಿ ಜನವರಿ 1993ರ ಕೊನೆಯವರೆಗೆ 51.98 ಕೋಟಿ ರೂ.ಗಳ ಹಣ ಭರವಸೆ ಪತ್ರ ಬಿಡುಗಡೆ ಮಾಡಲಾಗಿದೆ.

ಇ) ಭರವಸೆ ಪತ್ರದ ಮೂಲಕ ಬಿಡುಗಡೆ ಮಾಡಲಾದ ಹಣದಲ್ಲಿ ಜನವರಿ 1993ರ ಕೊನೆಯವರೆಗೆ ಕಾಮಗಾರಿಗಳಿಗಾಗಿ 50.65 ಕೋಟಿ ರೂ.ಗಳು ವೆಚ್ಚವಾಗಿದೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ:– ಮಾನ್ಯ ಅಧ್ಯಕ್ಷರೇ, 1992–93ನೇ ಸಾಲಿನಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಗೆ 155 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ನಿಗದಿ

ಮಾಡಲಾಗಿರುವುದನ್ನು ಹೇಳಿದ್ದಾರೆ. ಇದರಲ್ಲಿ ಇದುವರೆಗೆ ಬಿಡುಗಡೆ ಆಗಿದ್ದು ಕೇವಲ 51.98 ಕೋಟಿ ರೂಪಾಯಿ ಎಂದು ಸರ್ಕಾರ ಹೇಳುತ್ತದೆ. ಇದರಲ್ಲಿ ಖರ್ಚು ಮಾಡಿದ್ದುದು 51 ಕೋಟಿ ರೂಪಾಯಿಯೆಂದು ಸರ್ಕಾರದಿಂದ ಉತ್ತರ ಬಂದಿದೆ. ಸರ್ಕಾರ ನಿಗದಿ ಮಾಡಿದ 155 ಕೋಟಿಯಲ್ಲಿ ಕೇವಲ 51 ಕೋಟಿ ಬಿಡುಗಡೆ ಮಾಡಿ ಖರ್ಚು ಮಾಡಿದ್ದರೆ 2000ನೇ ಇಸವಿಯ ಒಳಗೆ ಕೃಷ್ಣಾ ಮೇಲ್ದಂಡೆ ಕಾರ್ಯ ಮುಗಿಸುವುದಕ್ಕೆ ಸಾಧ್ಯವೇ ? ಸರ್ಕಾರ ನಿಗದಿಪಡಿಸಿರುವ ಹಣದಲ್ಲಿ ಕೇವಲ 51 ಕೋಟಿ ರೂಪಾಯಿ ಖರ್ಚು ಏಕೆ ಆಗಿದೆ ? ಇದರ ಬಗ್ಗೆ ವಿಚಾರ ಮಾಡಬೇಕು ?

ಶ್ರೀ ಎಸ್. ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೇ, ನಾವು 1992ನೇ ಇಸವಿಯಲ್ಲಿ ಕೇಳಿದ ಹಣದ ಮೊತ್ತ, ಬಿಡುಗಡೆ ಆದ ಹಣದ ಮೊತ್ತ, ಖರ್ಚು ಆಗಿರತಕ್ಕ ಹಣದ ಮೊತ್ತ – ಇದರ ಬ್ರೇಕಪ್ ಕೊಡಬಹುದಾದರೆ ನಾವು ಕೇಳಿದ್ದು 77 ಕೋಟಿ 57 ಲಕ್ಷ ರೂಪಾಯಿಗಳು.

10.40 ಎ.ಎಂ.

ಸರ್ಕಾರದಿಂದ ಬಿಡುಗಡೆಯಾದಂಥ ಮೊತ್ತ 51 ಕೋಟಿ 98 ಲಕ್ಷ ರೂಪಾಯಿಗಳು. ಮತ್ತು ನಾವು ಖರ್ಚು ಮಾಡಿರತಕ್ಕಂಥಾದ್ದು 50 ಕೋಟಿ 65 ಲಕ್ಷ ರೂಪಾಯಿಗಳು. ಅದಾದ ಮೇಲೆ ಬಹುಶಃ ನಮ್ಮ ಬಿಲ್ಸ್ ಪೆಂಡಿಂಗ್ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ as on 1.3.93ರಲ್ಲಿ 2,741 ಲಕ್ಷ ರೂಪಾಯಿಗಳು. ಆದ್ದರಿಂದ ಇವೆಲ್ಲಕ್ಕೂ ಕೂಡ ಎಲ್ ಒಸಿಗಳನ್ನು ರಿಲೀಸ್ ಮಾಡಿ ಎಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ:– ಅಧ್ಯಕ್ಷರೇ, ನಾನು ಕೇಳುತ್ತಿರುವುದು, ಸರ್ಕಾರ ನಿಗದಿಪಡಿಸಿರುವುದು 150 ಕೋಟಿ ರೂಪಾಯಿಗಳು. 70–90 ಕೋಟಿ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ನಾನು ಕೇಳುತ್ತೇನೆ, ಈ ಸರಕಾರಕ್ಕೆ ಈ ಹಣವನ್ನು ಖರ್ಚು ಮಾಡುವುದಕ್ಕೆ ಏಕೆ ಆಗಲಿಲ್ಲ ? ಇದಕ್ಕೆ ಕಾರಣಗಳೇನು ? ಈಗ ನಡೆಯುತ್ತಾ ಇರತಕ್ಕಂಥ ವರ್ಕ್ಸ್ ಏನಿವೆ, ಇದರಲ್ಲಿ ಆಲಮಟ್ಟಿಯದ್ದು ಸೇರಿದೆಯೇ ಎಂದು ತಿಳಿಸಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ:– ಇದೆಲ್ಲ ಸೇರಿರತಕ್ಕಂಥಾದ್ದು. ಆಲಮಟ್ಟಿ, ನಾರಾಯಣಪುರ, ಇಂಡಿ ಚಾನಲ್ ಮುದ್ನಾಳ ಚಾನಲ್ ಎಲ್ಲ ಸೇರಿರತಕ್ಕಂಥಾದ್ದು.

ಶ್ರೀ ಶಿವಶೇಖರಪ್ಪಗೌಡ ಶಿರವಾಳ:– ಕೇವಲ 51 ಕೋಟಿ ಬಿಡುಗಡೆ ಮಾಡಬೇಕಾದರೆ ಅದಕ್ಕೆ ಕಾರಣವೇನು ? ಇದನ್ನು ಸವಿಸ್ತಾರವಾಗಿ ಹೇಳಬೇಕು. ಸರ್ಕಾರ ನಿಗದಿಪಡಿಸಿದ ಹಣವನ್ನೂ ಕೂಡ ಏಕೆ ಖರ್ಚು ಮಾಡಿಲ್ಲ ? ಇದು ಬಹಳ ಮಹತ್ತರವಾದ ಪ್ರಶ್ನೆ ಇದೆ. 155 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿಟ್ಟು ಕೇವಲ 61–70 ಕೋಟಿ ಖರ್ಚು ಮಾಡಬೇಕಾದರೆ ಅದಕ್ಕೆ ಕಾರಣವೇನು ?

ಶ್ರೀ ಎಸ್. ಎಂ. ಕೃಷ್ಣ:– ಇದಕ್ಕೆ ಕಾರಣಗಳು ಹಲವಾರು ಇವೆ. ತನ್ನ ಇಲಾಖೆಗಳ ಬೇಡಿಕೆಗಳು ಇವತ್ತೇ ಇಲ್ಲಿ ಚರ್ಚೆಗೆ ಬರುತ್ತಾ ಇವೆ. ಇವತ್ತು – ನಾಳೆ ಚರ್ಚೆಯಾಗುತ್ತದೆ. ಆದ್ದರಿಂದ ಮಾನ್ಯ ಶಿರವಾಳ ಅವರು ಹೇಳಬೇಕಾದುದನ್ನೆಲ್ಲ ಅಲ್ಲಿ ಹೇಳಿದರೆ, ಸವಿಸ್ತಾರವಾದ ಉತ್ತರವನ್ನು ನಾನು ಕೊಡಬಲ್ಲೆ.

Special Notification Under Section 61 of Civil Procedure Code.

374 (2026): Prof. M.D. Nanjundaswamy (Dharwad Rural):–

Will the Hon'ble Minister for Law and Parliamentary Affairs be pleased to state

Whether Government have issued and brought into force any special notificaton as per powers vested in State Governments Under Section 61 of the Civil Procedure Code since 1985?

Sri. Harnahalli Ramaswamy (Hon'ble Minister for Law and Parliamentary Affairs):-

No.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಸನ್ಮಾನ್ಯ ಸಭಾಧ್ಯಕ್ಷರೇ, 1985ರಿಂದ ಈಚೆಗೆ ಸಿವಿಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 61ರ ಪ್ರಕಾರ ರಾಜ್ಯ ಸರ್ಕಾರಗಳಿಗೆ ಕೊಟ್ಟಿರುವ ಅಧಿಕಾರದನ್ವಯ ವಿಶೇಷ ಪ್ರಕಟಣೆಯನ್ನೇನಾದರೂ ಸರ್ಕಾರ ಹೊರಡಿಸಿ ಜಾರಿಗೊಳಿಸಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. 85ರಿಂದ ಈಚೆಗೆ ಎಂದು ನಾನು ಏಕೆ ಕೇಳಿದೆ ಎಂದರೆ, ಸೆಪ್ಟೆಂಬರ್ 16, 1985 – In Writ Petitions Nos. 32274 to 32277 of 1981 ನಿಮ್ಮ ಸರ್ಕಾರ ರಾಜ್ಯ ಹೈಕೋರ್ಟಿಗೆ ಒಂದು ಅಂಡರ್‌ಟೇಕಿಂಗ್ ಕೊಟ್ಟಿದೆ. ಅದರ ಆಧಾರದ ಮೇಲೆ these writ petitions were disposed of. ಅದನ್ನು ನಾನು ಓದುತ್ತೇನೆ – "In view of the undertaking given by the learned Advocate General on behalf of the State Government to the Court, that a notification as contemplated by Section 61 of the Code of Civil Procedure will be issued within four weeks from this date. According the said undertaking these writ petitions stands disposed of." ಅದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕಳಿಸುತ್ತಿದ್ದೇನೆ. ಸಭಾಧ್ಯಕ್ಷರೇ, ಇದನ್ನು ಉದ್ದೇಶಪೂರ್ವಕವಾಗಿ ಸರ್ಕಾರ ಮಾಡಿಲ್ಲ. ಏಕೆಂದರೆ, ಸೆಕ್ಷನ್ 61ರ ಪ್ರಕಾರ ಕೃಷಿಕರಿಗೆ ಒಂದು ವರ್ಷಕ್ಕೆ ಏನು ಜೀವನಾವಶ್ಯಕ ದವಸ ಧಾನ್ಯಗಳನ್ನು ಜಪ್ತಿ ಮಾಡಕೂಡದು ಎಂದು ಸಿವಿಲ್ ಪ್ರೊಸೀಜರ್ ಕೋಡ್ ಸೆಕ್ಷನ್ 61 ಹೇಳುತ್ತದೆ. I will read section 61.

SRI HARNAHALLI RAMASWAMY:- What is the question?

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಉದ್ದೇಶಪೂರ್ವಕವಾಗಿ ತಾವು ಮಾಡಿಲ್ಲ. ಜೊತೆಗೆ ಸೆಕ್ಷನ್ 61ರಲ್ಲಿ ತಾವು ಕೋರ್ಟಿನಲ್ಲಿ ಹೇಳಿದ ಹಾಗೆ ಸ್ಪೆಶಲ್ ನೋಟಿಫಿಕೇಶನ್ ಅನ್ನು ಮಾಡುವುದು ಬಿಟ್ಟು ಸೆಕ್ಷನ್ 61ರಲ್ಲಿ ಯಾವ್ಯಾವ ವಸ್ತುಗಳು ಜಪ್ತು ಮಾಡಬಾರದು ಎಂದು ನಿಷೇಧವಾಗಿವೆ, ಅದನ್ನು ಮಾಡುತ್ತಿದ್ದಾರೆ.

ಹಂಡೆ, ಪಾತ್ರೆಗಳು ಇತ್ಯಾದಿ ಎಲ್ಲವನ್ನೂ ಮಾಡುತ್ತಾ ಇದ್ದಾರೆ. ಇದರ ಜೊತೆಗೆ, ಈಚೆಗೆ ರೇಡಿಯೋ, ಗೋಡೆ ಗಡಿಯಾರ, ಟಿ.ವಿ. ಇವೆಲ್ಲವನ್ನೂ ಜಪ್ತಿ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದವರು, ರಾಜ್ಯ ಸರ್ಕಾರದವರು ಕೃಷಿಕರಿಗೆ ಬೇರೆ ಕಾರ್ಯಕ್ರಮವನ್ನೂ ಹಾಕಿಕೊಂಡಿದ್ದಾರೆ. ನಾವು ಗಡಿಯಾರ ನೋಡಿಕೊಂಡು, ಟಿ.ವಿ. ತಿರುಗಿಸಬೇಕೋ ಅಥವಾ ಏನು ಮಾಡಬೇಕೆನ್ನುವುದನ್ನು ಹೇಳಬೇಕು. ಅದೇ ನಮ್ಮ ವ್ಯವಸಾಯಕ್ಕೆ ಸಂಬಂಧಪಟ್ಟಂಥ ವಸ್ತುಗಳು ಈ ಟಿ.ವಿ., ರೇಡಿಯೋ, ಗೋಡೆ ಗಡಿಯಾರಗಳೇ ಎಂಬ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಏಕೆಂದರೆ, ನಾವು ರೈತರಿಗೆ ಹೇಳಿದ್ದೇವೆ. ಈ ಸಿವಿಲ್ ಪ್ರೊಸೀಜರ್ ಕೋಡ್‌ನಲ್ಲಿ ಏನೇನು ನಿಷೇಧ ಆಗಿದೆ, ಅದನ್ನು ಯಾರೇ ಆದರೂ

ಮುಟ್ಟಕೂಡದು. ನ್ಯಾಯಾಧೀಶರೂ ಕೂಡ ಮುಟ್ಟುವುದಕ್ಕಾಗುವುದಿಲ್ಲ. ಮುಟ್ಟಿದರೆ, ಕಳವು ಆಗುತ್ತದೆ. ಕಳವು ಆಯಿತೆಂದರೆ, ಕಳವು ಮಾಡುವವರಿಗೆ, ಏನು ಮಾಡಬೇಕೆನ್ನುವುದಕ್ಕೆ ಸೆಕ್ಷನ್ 101 ಇಂಡಿಯನ್ ಪೀನಲ್ ಕೋಡ್‌ನಲ್ಲಿ ಇರುತ್ತದೆ. ಪ್ರಾಣ ತೆಗೆಯುವುದನ್ನು ಬಿಟ್ಟು ಮಿಕ್ಕಿದ್ದು ಏನು ಬೇಕಾದರೂ ಮಾಡಬಹುದು. ಇದನ್ನು ಹೇಳೋಣವೇ ಅಥವಾ ನಾವು ಕಂಟೆಂಪ್ಟ್ ಪಿಟಿಷನ್ ಹಾಕುವುದರೊಳಗಾಗಿ, ನೀವು ನೋಟಿಫಿಕೇಷನ್ ಹೊರಡಿಸುತ್ತೀರಾ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈಗ ಏನು ಹೇಳುತ್ತಿದ್ದಾರೆ, ಅದನ್ನು ಅವರು ಪ್ರಶ್ನಾವಳಿಯಲ್ಲಿ ಸೇರಿಸಿದ್ದರೆ, ವಿಷಯಗಳನ್ನು ಸಂಗ್ರಹಿಸಿ, ಉತ್ತರ ಕೊಡಬಹುದಿತ್ತು. ಅವರು ಮೊಗಮ್ಮಾಗಿ ನೋಟಿಫಿಕೇಷನ್ ಇದೆಯೇ ಎಂದು ಕೇಳಿದ್ದರು, ''ಇಲ್ಲ'' ಎಂದು ಹೇಳಿದ್ದೇವೆ. ಬಾಕಿ ಎಲ್ಲದಕ್ಕೂ ಅವರು ನೋಟೀಸ್ ಕೊಟ್ಟರೆ, ಉತ್ತರವನ್ನು ತರಿಸಿ ಹಾಜರುಪಡಿಸುತ್ತೇವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನಾನು, ಸರ್ಕಾರದಲ್ಲಿ ಕಾನೂನು ಇಲಾಖೆ ಇದೆಯೆಂದು ತಿಳಿದುಕೊಂಡಿದ್ದೇನೆ. It is a final order by the Hon'ble High Court of Karnataka in a petition particularly related to Sections 60 and 61 and the Advocate General has given an Undertaking that a notification will be issued within four weeks after 16th of September 1985. Why should I remind this Government? What is your Law Department doing? What is the Law Minister doing?

SRI HARNAHALLI RAMASWAMY:– The Law Minister is here to answer your questions. It is not a part of the Debate. If he had informed me earlier, the office would have put up a note regarding the undertaking given and all those details. At present, I do not have the details. I will examine the question. You have mentioned about the Writ Petitions and the undertaking given by the Advocate General. I will get the entire details. If you raise the question again, I will answer.

PROF. M.D. NANJUNDA SWAMY:– There is nothing left for the Government to examine.

(Interruptions)

SRI HARNAHALLI RAMASWAMY:– You have deliberately prevented the Government in coming with the correct answer.

PROF. M.D. NANJUNDA SWAMY:– There is nothing left for the Government to examine. It is a direction given by the Court. It is an undertaking given by your Government. What is there to examine?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ನೀವು ಈ ಪ್ರಶ್ನೆ ಮೊದಲೇ ಕೇಳಿದ್ದರೆ, ಮಾಹಿತಿಯನ್ನು ತರಿಸುತ್ತಿದ್ದೆವು. Why did you...

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಅದಕ್ಕೇ ನಾನು ಕೇಳಿದ್ದುದು, ನಿಮ್ಮ ಇಲಾಖೆ ಏನು ಮಾಡುತ್ತಾ ಇದೆ ಎಂದು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಇಲಾಖೆಯಲ್ಲಿ ನಡೆದಿರತಕ್ಕ ಸಮಸ್ತ ವಿಷಯವನ್ನೂ, at a particular point of time ತಮಗೆ ಹೇಳುವುದಕ್ಕಾಗುವುದಿಲ್ಲ.

ಅಕ್ಕೂರುಮೊಳೆಯ ಉಪಕೇಂದ್ರ ಸ್ಥಾಪನೆ

375 (2037): ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚನ್ನಪಟ್ಟಣ ಮತ ಕ್ಷೇತ್ರದಲ್ಲಿ ಪದೇ ಪದೇ ವಿದ್ಯುತ್ ಸರಬರಾಜು ನಿಲುಗಡೆಯಿಂದಾಗಿ ಬಳಕೆದಾರರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅಕ್ಕೂರುಮೊಳೆ ಉಪಕೇಂದ್ರದ ಕೆಲಸವು ಉಪಕೇಂದ್ರದಲ್ಲಿನ ಸಿಬ್ಬಂದಿ ಕೊರತೆಯಿಂದಾಗಿ ವಿಳಂಬವಾಗುತ್ತಿದೆ ಎನ್ನುವುದು ನಿಜವೇ;

ಇ) ಹಾಗಿದ್ದರೆ, ಈ ಉಪಕೇಂದ್ರದ ಕೆಲಸಕ್ಕೆ ಅಗತ್ಯ ಸಿಬ್ಬಂದಿ ನೇಮಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಹೌದು ಬಂದಿದೆ.

ಆ) ಟಿ.ಕೆ. ಹಳ್ಳಿಯಿಂದ ಅಕ್ಕೂರುಮೊಳೆಗೆ 56ಕೆ.ವಿ. ಮಾರ್ಗದ ನಿರ್ಮಾಣ ಕೆಲಸವನ್ನು 'ಟರ್ನ್‌ಕೀ ಆಧಾರದ ಮೇಲೆ ಗುತ್ತಿಗೆಗೆ ನೀಡಲಾಗಿದ್ದು, ನಿರ್ಮಾಣ ಕೆಲಸವು ಪ್ರಗತಿಯಲ್ಲಿದೆ.

ಅಕ್ಕೂರು ಮೊಳೆಯಲ್ಲಿ 66:11 ಕೆ.ವಿ. ಉಪಕೇಂದ್ರ ನಿರ್ಮಾಣ ಕುರಿತಂತೆ, ನಿರ್ಮಾಣ ಕೆಲಸಕ್ಕಾಗಿ, ಗುತ್ತಿಗೆ ಕೆಲಸದ ಆಧಾರದ ಮೇಲೆ ಟೆಂಡರುಗಳನ್ನು ಕರೆಯಲಾಗಿದೆ. ಗುತ್ತಿಗೆದಾರರಿಗೆ ಅಗತ್ಯವಿರುವ ಸಾಮಗ್ರಿಗಳನ್ನು ಮಂಡಳಿಯು ಸರಬರಾಜು ಮಾಡುವುದು. ಆದುದರಿಂದ, ಸಿಬ್ಬಂದಿ ಕೊರತೆಯ ಪ್ರಶ್ನೆ ಏಳುವುದಿಲ್ಲ.

ಇ) ಇದೇ ಪ್ರಶ್ನೆಯ (ಆ) ದಲ್ಲಿ ನೀಡಲಾಗಿರುವ ಉತ್ತರದನ್ವಯ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಾದತ್ ಅಲಿಖಾನ್:– ಮಾನ್ಯ ಅಧ್ಯಕ್ಷರೇ, ಅಕ್ಕೂರ್‌ಮೊಳೆ ಸ್ಟೇಷನ್ 1990–91ರಲ್ಲಿ ಸ್ಯಾಂಕ್ಷನ್ ಆಗಿದೆ. ಅಂದರೆ, ಸ್ಯಾಂಕ್ಷನ್ ಆಗಿ ಮೂರು ವರ್ಷಗಳಾಗಿವೆ. Line from T. K. Halli to Akkur Mole was a contract given to M/s. Larsen and Toubro. ಆ ಲೈನ್ ಬಂದುಬಿಟ್ಟಿದೆ. ಆದರೆ ಸಿವಿಲ್ ವರ್ಕ್ ನಡೆಯುತ್ತಾ ಇಲ್ಲ. ಎರಡನೆಯದು, ಚನ್ನಪಟ್ಟಣ ತಾಲ್ಲೂಕಿನಲ್ಲಿ, ಹಾಲಿ ಸುಮಾರು 9 ಸಾವಿರ ಇರಿಗೇಷನ್ ಪಂಪುಸೆಟ್ಟುಗಳಿವೆ. I think this is the third highest number of pumpsets in Channapatna taluk in the State.

ಮೊನ್ನೆ ನಾನು ಹೋದಾಗ, ಅಲ್ಲಿನ ಪೊಲೀಸ್ ಟ್ರೈನಿಂಗ್ ಸ್ಕೂಲಿನಲ್ಲಿ ಕುಳಿತಿದ್ದೆ. ಪವರ್ ಕಂಪ್ಲೀಟ್ ಫೆಲ್ಯೂರ್ ಆಯಿತು. ಸುಮಾರು 4 ಗಂಟೆ ಪವರ್ ನಿಂತುಹೋಯಿತು. ಪ್ರತಿದಿನ ಮಧ್ಯಾಹ್ನ 12 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಅಲ್ಲಿ ಪವರ್ ಇರುವುದಿಲ್ಲ. ಅಲ್ಲಿ ಏನಾಗಿದೆ ಎಂದರೆ, ನಮ್ಮ ಅಕ್ಕೂರ್‌ಮೊಳೆ ಸ್ಟೇಷನ್ ಆಗಲಿಲ್ಲ. ಅಮೇಲೆ ಇನ್ನೊಂದು 12.5 ಎಂ.ವಿ.ಎ. ತಮಗೆ ಕೇಳಿದ್ದೆವು;

ಆದೂ ಬರಲಿಲ್ಲ. ಹಾಗಾಗಿ, ಒಟ್ಟಾರೆ ಪವರ್ ಆಗಾಗ ಹೋಗುತ್ತಲೇ ಇರುತ್ತದೆ. ಆದಕ್ಕೆ, ಅಕ್ಕೂರ್ ಮೊಳಿ ಸ್ಟೇಷನ್ ಕೂಡಲೇ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೇ, ಇದು ಅಕ್ಕೂರುಮೊಳಿ ಒಂದು ಟರ್ನ್‌ಕೀ ಪ್ರಾಜೆಕ್ಟ್ ಎಂದು ಕನ್ನಿಡರ್ ಮಾಡಿ ಗುತ್ತಿಗೆಗೆ ಕೊಟ್ಟಿದ್ದೇವೆ. ಗುತ್ತಿಗೆದಾರರಿಗೆ ಬೇಕಾದಂತಹ ಸಾಮಗ್ರಿಗಳನ್ನು ನಾವೇ ಒದಗಿಸಿಕೊಟ್ಟು ತ್ವರಿತಗತಿಯಲ್ಲಿ ಕೆಲಸವನ್ನು ಮಾಡಬೇಕು ಎಂದು ಅವರಿಗೆ ಹೇಳಿದ್ದೇವೆ. ಇದು 1993ರ ಏಪ್ರಿಲ್ ಅಂತ್ಯದ ವೇಳೆಗೆ 66 ಕೆ.ವಿ. ಮಾರ್ಗದ ನಿರ್ಮಾಣ ಕೆಲಸ ಪ್ರಾರಂಭ ಮಾಡಿ 1993–94ರ ಅವಧಿಯ ಕೊನೆಯಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಕೆಲಸ ವಿಳಂಬವಾಗಿದೆ ಎಂದು ಏನು ಅಭಿಪ್ರಾಯಪಟ್ಟಿದ್ದೀರಿ, ಅದರ ಆಧಾರದ ಮೇಲೆ ಈ ಕೆಲಸವನ್ನು ತ್ವರಿತಗತಿಯಲ್ಲಿ ಮಾಡಬೇಕು ಎಂದು ನಿರ್ದೇಶನ ಕೊಡುತ್ತೇನೆ.

ಶ್ರೀ ಶೈಲಂ ಜಲಾಶಯದಿಂದ ಅಕ್ರಮವಾಗಿ ನೀರು ಬಿಡುವ ಯೋಜನೆ

316 (924): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ನದಿಯ ಜಲಾನಯನ ಪ್ರದೇಶದಿಂದ ಹೊರಗಿನ ಪ್ರದೇಶಗಳಿಗೆ ಆಂಧ್ರ ಸರ್ಕಾರವು ಶ್ರೀಶೈಲಂ ಜಲಾಶಯದಿಂದ ಅಕ್ರಮವಾಗಿ ನೀರು ಬಿಡುವ ಯೋಜನೆಯೊಂದನ್ನು ಕಾರ್ಯರೂಪಕ್ಕೆ ತರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಅಕ್ರಮ ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು ವಿಶ್ವಬ್ಯಾಂಕ್ ನೆರವು ಕೊಡಿಸಲು ಪ್ರಯತ್ನ ಮಾಡುತ್ತಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಕರ್ನಾಟಕ ರಾಜ್ಯದ ರೈತರಿಗೆ ಅನ್ಯಾಯ ಆಗುವ ಈ ಯೋಜನೆಯನ್ನು ತಡೆಹಿಡಿಯವುದರಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಹೌದು.

ಆ) ಇದರ ಬಗ್ಗೆ ಈ ಸರ್ಕಾರದಲ್ಲಿ ಮಾಹಿತಿ ಇರುವುದಿಲ್ಲ.

ಇ) ಮದ್ರಾಸ್ ನಗರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆಯ ನೆಪದಲ್ಲಿ ಪ್ರತಿ ವರ್ಷ ಸುಮಾರು 300 ಟಿಎಂಸಿ ಪ್ರಮಾಣದ ನೀರನ್ನು ಕೃಷ್ಣಾ ಜಲಾನಯನ ಪ್ರದೇಶದಿಂದ ಹೊರಗಿನ ಪ್ರದೇಶಗಳಿಗೆ ನೀರಾವರಿಗಾಗಿ ಹಾಯಿಸಬಹುದಾದ ತೆಲುಗು ಗಂಗಾ ಯೋಜನೆಗೆ ಅನುಮತಿ ನೀಡಬಾರದೆಂದು ಕೇಂದ್ರ ಸರ್ಕಾರಕ್ಕೆ ಕರ್ನಾಟಕವು ಈ ಹಿಂದೆಯೇ ಆಕ್ಷೇಪಿಸಿರುವುದಲ್ಲದೆ, ಈ ವಿಚಾರದಲ್ಲಿ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವ ಬಗ್ಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ವೈ. ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ಆಂಧ್ರಪ್ರದೇಶದವರು ಕೃಷ್ಣಾ ಕೊಳ್ಳದಿಂದ ನೀರನ್ನು ಅಕ್ರಮವಾಗಿ ಉಪಯೋಗಿಸಿಕೊಳ್ಳುತ್ತಿರುವುದು ಸತ್ಯ ಎನ್ನುವ ಮಾತನ್ನು ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ದುರಾದೃಷ್ಟ ಏನೆಂದರೆ ಈ ಒಂದು ಅಕ್ರಮ ನೀರನ್ನು ಉಪಯೋಗಿಸಿಕೊಳ್ಳುವುದನ್ನು ನಾವು ತಡೆಯಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕುಳಿತುಕೊಂಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಭಾಧ್ಯಕ್ಷರೇ, ಇದು ಒಪ್ಪಂದದ ವೈಲೇಶನ್ ಆಗಿದೆ. ಆಂಧ್ರಪ್ರದೇಶ ಸರ್ಕಾರ, ಕರ್ನಾಟಕ ಸರ್ಕಾರ ಮತ್ತು ತಮಿಳುನಾಡು ಸರ್ಕಾರ 5–5